ಸದನದ ಕಲಾಪವು ಮಧ್ಯಾಹ್ನ 12.06ಕ್ಕೆ ಪ್ರಾರಂಭವಾಯಿತು.

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

(ವಂದೇ ಮಾತರಂ ಗೀತೆಯೊಂದಿಗೆ ಸದನದ ಕಲಾಪಗಳು ಪ್ರಾರಂಭವಾದವು)

ಅಧ್ಯಕ್ಷರು : ಈಗ ಹುಟ್ಟುಹಬ್ಬದ ಶುಭಾಷಯಗಳು. ಈ ದಿನ ಅಂದರೆ ದಿನಾಂಕ : 23–06–2014 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾದ ಶ್ರೀ ಕೆ.ಗೋಪಾಲಯ್ಯ ಹಾಗೂ ಡಾ: ವಿಶ್ವನಾಥ್ ಈರಣ್ಣಗೌಡ ಪಾಟೀಲ್ ಇವರುಗಳಿಗೆ ಜನ್ಮ ದಿನದ ಶುಭಾಷಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಆಡಳಿತ ಪಕ್ಷದವರ ಉಪಸ್ಥಿತಿ ಕಾಣುತ್ತಿಲ್ಲ. ಅವರ ಶಾಸಕಾಂಗ ಪಕ್ಷದ ಸಭೆ ಇರಬಹುದು. ಆದರೆ ಸದನ ಪ್ರಾರಂಭವಾಗುವ ಮೊದಲನೆ ದಿನವೇ ಮಾನ್ಯ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಉಳಿದ ಸಚಿವರು, ಶಾಸಕರಾಗಲಿ, ಶಾಸಕಾಂಗ ಪಕ್ಷದ ಸಭೆಯನ್ನು ಬೇಗ ಮುಗಿಸಿ ಕಾಲಕ್ಕೆ ಸರಿಯಾಗಿ ಸದನಕ್ಕೆ ಬರಬೇಕಾಗಿರುವುದು ಈ ಸದನಕ್ಕೆ ತೋರುವ ಗೌರವ. ಮೊದಲ ದಿನವೇ ಈ ರೀತಿ ಆಗುವುದು ಈ ಸದನಕ್ಕೆ ಗೌರವ ತರುವುದಿಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ನಾನು ಖಂಡಿತ ಒಪ್ಪುತ್ತೇನೆ. ಈ ವಿಚಾರವನ್ನು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ : ಎಲ್ಲರನ್ನು ನೇಪಾಳಕ್ಕೆ ಕರೆದುಕೊಂಡು ಹೋಗಿ ಟ್ರೈನಿಂಗ್ ಕೊಟ್ಟು ಕರೆದುಕೊಂಡು ಬಂದಿದ್ದರೆ ಸರಿಯಾಗಿರುವುದು. ಜೆಡಿ(ಎಸ್)ನವರು ಶ್ರೀಲಂಕಾಗೆ ಹೋಗಿ ಬಂದ ಮೇಲೆ ಕೋರಂ ಚೆನ್ನಾಗಿ ಇದೆ. ಅವರು ಶ್ರೀಲಂಕಾಗೆ ಹೋಗುವುದಕ್ಕಾಗುವುದಿಲ್ಲ, ನೇಪಾಳಕ್ಕೆ ಕರೆದುಕೊಂಡು ಹೋಗಿ ಬಂದಿದ್ದರೆ ಸರಿಯಾಗುತ್ತಿತ್ತು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಸಿಎಲ್‌ಪಿ ಮೀಟಿಂಗ್ ಮುಗಿದಿದೆ, ಈಗ ಅವರು ಬರುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಸಿಎಲ್‌ಪಿ ಮೀಟಿಂಗ್ ಇದೆ ಎನ್ನುವುದನ್ನು ಒಪ್ಪಿದ್ದೇವೆ. ಆ ಸಿಎಲ್‌ಪಿಯನ್ನು ಬೇಗ ಮುಗಿಸಿಕೊಂಡು ಅಧಿವೇಶನ ಪ್ರಾರಂಭವಾಗುವ ಮೊದಲನೆ ದಿನ ಈ ರೀತಿ ವಿಳಂಬವಾದರೆ ಹೇಗೆ ?